ISSN : 2320-0391

साहित्य और संस्कृति

# सृजन ಸೃಜನ

हिंदी-कन्नड त्रैमासिक पत्रिका

ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

अप्रैल-जून २०१८



RNI Regd. No. KARBIL/2014/54464



## ಪ್ರಜಾರಾಜ್ಯ

ಪ್ರಜಾರಾಜ್ಯ ಬಂತು ಬಂತು, ಸಕಲಪ್ರಜಾರಾಜ್ಯ !
ಪ್ರಜೆಗಳಿಗೇ ಇಲ್ಲಗೊತ್ತು 'ಯಾರದು ಈ ರಾಜ್ಯ !

೧

ಆಯ್ಕೆಯ ದಿನ ಬಂದಾಕ್ಷಣ ಸವಿಯ ಭಕ್ಷ್ಯ-ಭೋಜ್ಯ
ಪ್ರಜರ ಬಾಯ್ಗೆ ಬೀಳ್ವುದು ನಿಜ, ಅದಕೆ ಪ್ರಜಾರಾಜ್ಯ !
ಆಯ್ಕೆ ಮುಗಿದ ಮರುದಿನವೇ ಪ್ರಜೆಗಳೆಲ್ಲ ತ್ಯಾಜ್ಯ !
ಪ್ರಜರ ಬಾಳೆ ಆಳುವವರ ತೆರೆದ ಬಾಯ್ಗೆ ಭಾಜ್ಯ !

೨

ಲಂಚಮುಕ್ಕುವವರ ಉಕ್ಕು, ಪ್ರಜಾರಾಜ್ಯವೇ ?
ಕಳ್ಳಪೇಟೆಯವರ ಬೇಟೆ, ಪ್ರಜಾರಾಜ್ಯವೆ ?
ಮಾತೆ ಮಾತು, ಕೃತಿಗೆ ತೂತು ! ಸುಖವು ಸಾಧ್ಯವೆ ?
ಆದರು ಇದು ಪ್ರಜಾರಾಜ್ಯ ! ಅಹಹ, ಚೋದ್ಯವೆ !

೩

ತನ್ನ ನಂಟ ಮಾಡುವ ಅನ್ಯಾಯವೆಲ್ಲ ನ್ಯಾಯ !
ಇನ್ನೆಲ್ಲರು ಬಿಡಲು ಬೇಕು ನ್ಯಾಯಕಾಗಿ ಬಾಯ !
ಆಡಳಿತದ ಆಸನಕ್ಕೆ ಬೇರೆ ಯಾರು ಕೈಯ-
ಹಚ್ಚದೆಯೇ ದುಡಿಯಬೇಕು. ಪ್ರಜಾರಾಜಧ್ಯೇಯ !

೪

ಭರತ ಭೂಮಿಯೆಲ್ಲ ಬಾಯಿಮಾತಿನಲ್ಲಿ ಒಂದೇ !
ಕೊರೆಯುತಿಹವು ಕಿವಿಗಳನ್ನು ಪರಸ್ಪರರ ನಿಂದೆ !
ಜಾತಿಜಗಳ, ನುಡಿ-ಗಡಿಗಳ ಜಗಳಗಳೇ ಮುಂದೆ,
ಜಗದೀಶಾ ನೀನೆ ಕಾಯೊ ಪ್ರಜಾರಾಜ್ಯ ತಂದೆ !

– ಆನಂದ ಕಂದ

## लोकतंत्र

लोकतंत्र आया, आया, सबका लोकतंत्र !
प्रजा को नहीं मालूम 'किसका है यह राज !

1

चुनाव के समय स्वादिष्ट भोज
प्रजा के मुँह में जरूर गिरेगा वही लोकतंत्र !
चुनाव के दूसरे दिन ही प्रजा, त्याज !
प्रजा का जीवन सत्ताधीशों के मुँह का भाज्य !

2

रिश्वतखोरों का ऊबाल, लोकतंत्र ?
कालाबाजारियों की चाल, लोकतंत्र ?
बातें ही बोतें, कार्य शून्य, क्या सुख मिलेगा ?
फिर भी यह, लोकतंत्र, हा हा हा !

3

अपने लोग अन्याय भी करेंगे वह न्याय !
दूसरों को न्याय के लिए लडना होगा !
उनके अधिकारों को कोई न करें स्पर्श,
सिर्फ परिश्रम करना, यही लोकतंत्र का उद्देश्य !

4

भरतभूमि सबके जुबान पर एक !
पर सबके कान निंदा से एक गए !
जात-पॉत, भाषा-प्रांत के झगडे ही सबसे आगे,
हे जगदीश, तू ही रक्षा कर, इस लोकतंत्र की !

– आनंद कंद

ISSN 2320-0371

सौम्य प्रकाशन
'कबीर कुंज' महाबलेश्वर कॉलनी,
दर्गा जेल के सामने,
विजयपुर - 586103 (कर्नाटक)

सौ

ಸೌಮ್ಯ ಪ್ರಕಾಶನ
'ಕಬೀರ ಕುಂಜ' ಮಹಾಬಳೇಶ್ವರ ಕಾಲೋನಿ,
ದರ್ಗಾ ಜೇಲ ಮುಂದೆ,
ವಿಜಯಪುರ – ೫೮೬೧೦೩ (ಕರ್ನಾಟಕ)

# ಪರಿವಿಡಿ


೧. ದೆಹಲಿ ಪ್ರವಾಸ • ಡಾ. ಎಸ್. ಟಿ. ಮೇರವಾಡೆ ೨೯

೨. ಹೆಣ್ಣು ಪರಿಸ್ಥಿತಿಯ ಕೈಗೊಂಬೆ : ಯಾಕೆ ? • ಕಾಂಬಳೆ ಧರಮಣ್ಣ ಭಗವಂತ ೩೪

೩. ಭಾರತೀಯ ಸಾಹಿತ್ಯ ಸಂದರ್ಭದಲ್ಲಿ ಕನ್ನಡ ಆತ್ಮಕಥನಗಳ ಮೇಲೆ ಮರಾಠಿ ಆತ್ಮಕಥನಗಳ ಪ್ರಭಾವ • ಡಾ. ಶೋಭಾ ನಾಯಕ ೩೮

೪. ನಿರಂಜನ ಅವರ 'ಚಿರಸ್ಮರಣೆ' ಕಾದಂಬರಿಯಲ್ಲಿ ಸಾಂಸ್ಕೃತಿಕ ಸಂಘರ್ಷ • ಹಮ್ಮಿಣಿ ಬಸವ್ವಾ ೪೨

೫. ರಂಗಪ್ರತಿಭೆ : ಏಣಗಿ ಬಾಳಪ್ಪ • ಹನುಮಂತ ಎಂ. ಕುಂಬಾರ ೪೪

೬ ಚೆನ್ನದಾಸ ಸಮುದಾಯದ ಗಾದೆಗಳು • ದಾಸರ ಪ್ರತಿಭಾ ೪೭

೭ ಮಲ್ಹಾರದ ಮಿನುಗು • ರಾಮಣ್ಣ ಕಾಸರ ೫೨


## ಅಂಕಣ – ೨


೮. ಓದು • ಡಾ. ಆರ್. ವ್ಹಿ. ಪಾಟೀಲ ೫೫


■■

# ದೆಹಲಿ ಪ್ರವಾಸ

• ಡಾ. ಎಸ್. ಟಿ. ಮೇರವಾಡೆ

ಪ್ರವಾಸ ಮಾಡುವದರಿಂದ ಭೌಗೋಳಿಕ ಜ್ಞಾನ, ಪರಿಸರ, ಬೇರೆ-ಬೇರೆ ಆಚಾರ-ವಿಚಾರಗಳು, ನಡೆ-ನುಡಿ, ಆಹಾರ-ವ್ಯವಹಾರ ಇವೆಲ್ಲ ಚೆನ್ನಾಗಿ ತಿಳಿಯುತ್ತವೆ. ಮುಂದೆ ಅದು ಜೀವನದುದ್ದಕ್ಕೂ ಸಹಕಾರಿಯಾಗಿ, ಜೀವನ ವಿಧಾನ ಕಲ್ಪಿಸುತ್ತದೆ. ಅಲ್ಲದೆ ಮನಸ್ಸಿನಲ್ಲಿ ನೆಮ್ಮದಿ, ಆನಂದಗಳನ್ನು ನೀಡುತ್ತದೆ. ಗಾಣದ ಎತ್ತಿನಂತೆ ತಿರುಗಿದಲ್ಲೇ ತಿರಗುತ್ತಾ ಒಂದೇ ರೀತಿ ಜೀವನ ಸಾಗಿಸುತ್ತಾ, ಸಂಸಾರ ತಾಪತ್ರಯದಲ್ಲಿ ಸಿಲುಕಿದ ಮನುಷ್ಯನಿಗೆ ಪ್ರವಾಸದ ನೆಪದಲ್ಲಿ ಸೌಂದರ್ಯ ತಾಣಗಳು, ಗುಡಿ-ಗುಂಡಾರಗಳು, ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸಿದಾಗ ತುಂಬಾ ಸಂತೋಷವಾಗುತ್ತದೆ. ಸಂತೋಷದೊಂದಿಗೆ ಲೋಕಜ್ಞಾನವೂ ಸಿಗುತ್ತದೆ. ಇಂತಹ ಸಂದರ್ಭದಲ್ಲಿ ಅನೇಕ ಜನರ ಜೀವನ ವಿಧಾನ, ವೇಷ-ಭೂಷಣದ ಪರಿಚಯ ಸಿಗುವದು. ಅಲ್ಲಿ ಯಾವ ನದಿ-ಪರ್ವತಗಳಿವೆ, ಯಾವ ಗಿಡ-ಮರಗಳಿವೆ, ಪ್ರಾಣಿ-ಪಕ್ಷಿಗಳು ಅಧಿಕವಾಗಿವೆ ಮುಂತಾದವುಗಳ ನೈಜ ಚಿತ್ರಣ ಕಾಣುತ್ತೇವೆ.

ನಿತ್ಯದ ಕಾರ್ಯದಿಂದ ಸ್ವಲ್ಪ ಬೇರ್ಪಟ್ಟು ಪ್ರವಾಸ ಕೈಗೊಂಡರೆ ಬುದ್ಧಿಯ ವಿಸ್ತಾರವಾಗುತ್ತದೆ ಜೊತೆಗೆ ದೈನಂದಿನ ಕಾರ್ಯಗಳಿಗೆ ಹೊಸ ಚೈತನ್ಯ ಸಿಗುತ್ತದೆ ಎಂಬ ಉದ್ದೇಶದಿಂದ ನಾವು ಕಾಲೇಜಿನ ಪ್ರಾಧ್ಯಾಪಕ ಬಳಕ ವರ್ಷಕ್ಕೆ ಒಂದಾದರೂ ಪ್ರವಾಸ ಮಾಡುತ್ತೇವೆ. ಈ ರೀತಿಯಾಗಿ ದೇಶ-ವಿದೇಶದ ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದ್ದೇವೆ. ಪ್ರತಿ ಸಲದಂತೆಯೇ ಈ ಸಲದ ನಮ್ಮ ಪ್ರವಾಸ ಶೈಕ್ಷಣಿಕ ಪ್ರವಾಸವಾಗಿತ್ತು.

ಒಂದು ದಿನ ಸಂಜೆ ದೆಹಲಿಯ ಡಾ. ಹರೀಶ ಅರೋಡಾ ಅವರಿಂದ ಫೋನ ಬಂತು. ನಮ್ಮ ಕಾಲೇಜಿನಲ್ಲಿ ೨೭, ೨೮, ಎಪ್ರೀಲ್ ೨೦೧೮ ರಂದು ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಮಾಡುತ್ತಾ ಇದ್ದೇವೆ ತಮ್ಮ ಬಳಗದೊಂದಿಗೆ ತಾವು ಬರಲೇಬೇಕು ಎಂದು ಆಗ್ರಹಿಸಿದರು. ಡಾ. ಹರೀಶ ಅರೋಡಾ ಅವರು ಒಳ್ಳೆಯ ಪ್ರಾಧ್ಯಾಪಕರು, ಕವಿಗಳು, ಸಂಶೋಧಕರು, ಒಳ್ಳೆಯ ಆಯೋಜಕರು ಜೊತೆಗೆ ಭಾಷಣಕಾರರು. ಸದಾ ಹಸನ್ಮುಖಿಗಳಾದ ಅರೋಡಾ ಹೃದಯವಂತರೂ ಸಹ. ೧೬ ಹಾಗೂ ೧೭, ಫೆಬ್ರುವರಿ ೨೦೧೮ ರಂದು ನಮ್ಮ ಕಾಲೇಜಿನಲ್ಲಿ ಏರ್ಪಡಿಸಿದ್ದ ಅಂತಾರಾಷ್ಟ್ರಿಯ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಒಳ್ಳೆಯ ಪ್ರಬಂಧವನ್ನು ಮಂಡಿಸಿದ್ದರು. ಕೇವಲ ಎರಡು ದಿನಗಳ ಅವರ ಸ್ನೇಹ ಹೃದಯದಲ್ಲಿ ಅಚ್ಚಳಿಯದೆ ಉಳಿದಿತ್ತು. ಅವರ ಆಮಂತ್ರಣಕ್ಕೆ ಮನಸು ಒಮ್ಮೆಂದ ಒಮ್ಮೆಲೆ ಒಪ್ಪಿಗೆ ನೀಡಿತು. ಮೊಬಾಯಿಲ್‌ನಲ್ಲಿ ಮಾತುಮುಗಿಸಿದ ನಂತರ ಯಾರಿಗೂ ಕೇಳದೆ, ವಿಚಾರಿಸದೆ ಒಪ್ಪಿಕೊಂಡೆನಲ್ಲ. ಅಷ್ಟರಲ್ಲಿ ನಮ್ಮ ರಾಜ್ಯದ ಚುನಾವಣೆ ದಿನಾಂಕ ಸಹ ಘೋಷಣೆಯಾಯಿತು. ಹೇಗೋ ನೋಡೋಣ ಅಂತಾ ಸಂಜೆ ಎಲ್ಲ ಪ್ರಾಧ್ಯಾಪಕ-ಸ್ನೇಹಿತರೊಂದಿಗೆ ಚರ್ಚಿಸಿದೆ. ನಮ್ಮ ಬಳಗವಂತು ದೊಡ್ಡದಿದೆ. ಹೆಚ್ಚಾಗಿ ಶೈಕ್ಷಣಿಕ ಪ್ರವಾಸ ಮಾಡುವವರೆಂದರೆ ಆರು ಜನ. ಅದರಲ್ಲಿ ಮೂರು ಜನ ಕನ್ನಡ ಪ್ರಾಧ್ಯಪಕರು, ಮೂವರು ಹಿಂದಿ. ಐದು ಜನ ಸೇರಿ ಚರ್ಚಿಸುವಾಗ ಡಾ. ಎಸ್. ಜೆ. ಜಹಾಗೀರದಾರ ಅವರು ತಡವಾಗಿ ಬಂದು ನಮ್ಮೆಲ್ಲರ ಮಾತು ಆಲಿಸುತ್ತಾ ಮೊಬಾಯಿಲ್‌ನಲ್ಲಿ ನೆಟ್ ಆರಂಭಿಸಿ, ನೋಡಿ 'ಸರ್ ವಿಮಾನ ಹಾಗೂ ರೈಲಿನಲ್ಲಿ ರಿಜರ್ವೇಶನ್ ಸಿಗುವದು' ಎಂದರು. 'ಬಹಳ ದಿನಗಳಾದವು ದೆಹಲಿಗೆ ಹೋಗಿಲ್ಲ ನಡೆಯಿರಿ ಹೋಗೋಣ'ಅಂತಾ ಪ್ರೊ. ಬಿ. ಬಿ. ಡೆಂಗನವರ ಹೇಳಿದರು. ಪ್ರೊ. ಡೆಂಗನವರ ಸುಖಿಜೀವಿ. ಪ್ರವಾಸ ಮಾಡುವದು,

ಹೊಸ ಬಟ್ಟೆ ಖರೀದಿಸುವದು ತರಹ-ತರಹದ ತಿಂಡಿ-ತಿನಿಸುಗಳು ಸವಿಯುವದರಲ್ಲಿ ಎಲ್ಲರಿಗಿಂತಲೂ ಒಂದು ಹೆಜ್ಜೆ ಮುಂದೆ. ಒಮ್ಮತದಿಂದ ಪ್ರವಾಸಕ್ಕೆ ಹೋಗುವ ನಿರ್ಣಯ ತೆಗೆದುಕೊಂಡೆವು. ಚುನಾವಣೆಯ ಕೆಲಸ ಬಂದರೆ ಹೇಗೆ? ಅಂತಾ ಗಂಭೀರ ಪ್ರಶ್ನೆ ಕಾಡತೊಡಗಿತು. ಏನೇ ಇರಲಿ ಇಂದು ರಿರ್ಜರ್ವೇಶನ ಮಾಡೋಣ ಮುಂದೆ ದೇವರಿದ್ದಾನೆ ಅಂದುಕೊಂಡು ರಿರ್ಜರ್ವೇಶನ್ ಕೆಲಸ ಪ್ರೊ. ಎಸ್. ಜೆ. ಜಹಾಗೀರದಾರ ಅವರು ಮಾಡಿದರು. ಡಾ. ಎಸ್. ಜೆ. ಜಹಾಗೀರದಾರ ಕ್ರಿಯಾಶೀಲ ವ್ಯಕ್ತಿ. ಕನ್ನಡ, ಹಿಂದಿ, ಇಂಗ್ಲೀಷ, ಮರಾಠಿ, ಉರ್ದು ಐದು ಭಾಷೆಗಳೊಂದಿಗೆ ಅಲ್ಪಸ್ವಲ್ಪ ಗುಜರಾತಿ ಭಾಷೆಯ ಜ್ಞಾನವಿದೆ. ಸಾಹಿತ್ಯದ ಯಾವದೇ ಕಾರ್ಯವಿದ್ದರೂ ಬೇಸರ ಮಾಡಿಕೊಳ್ಳುವ ಸ್ವಭಾವದವರಲ್ಲ. ನಮ್ಮ ಸೃಜನ ಬಳಗದಲ್ಲಿ ಅತಿ ಹೆಚ್ಚು ವಿದ್ಯಾರ್ಥಿಗಳ ಸಂಪರ್ಕದಲ್ಲಿರುವವರು ಡಾ. ಜಹಾಗೀರದಾರ ಅಂದರೆ ತಪ್ಪಾಗಲಿಕ್ಕಿಲ್ಲ. ಮರುದಿನವೆ ವಿಮಾನ ಹಾಗೂ ರೈಲಿನ ರಿರ್ಜರ್ವೇಶನ ಆಯಿತು. ಪತ್ರಿಕೋದ್ಯಮ, ಸಾಹಿತ್ಯ ಹಾಗೂ ರಾಷ್ಟ್ರೀಯತೆ ವಿಷಯ ಕುರಿತು ಎಲ್ಲರೂ ಪ್ರಬಂಧಗಳನ್ನು ತಯಾರಿಸಿ ಕೇವಲ ಎರಡೆ ದಿನಗಳಲ್ಲಿ ಮೇಲ್ ಸಹ ಮಾಡಿದೇವು. ಎಪ್ರಿಲ್ ೪ ರಂದು ಮುಂಜಾನೆ ಡಾ. ಹರೀಶ ಅವರಿಂದ ಫೋನ್ ಬಂತು. ಫೋನಿನಲ್ಲಿ ಅವರು 'ಈ ಸಲ ನಾವು ನಿಮ್ಮ ಹಾಗೆ ಭಾರತೀಯ ಎಲ್ಲ ಭಾಷೆಯ ಸಮಾನಾಂತರ ಗೋಷ್ಠಿ ಮಾಡುವುದಾಗಿ ನಿರ್ಧರಿಸಿದ್ದೇವೆ. ತಮ್ಮ ಬಳಗದ ಎಲ್ಲ ಪ್ರಬಂಧಗಳನ್ನು ಒಟ್ಟು ಗೂಡಿಸಿ ಪುಸ್ತಕದ ರೂಪದಲ್ಲಿ ತಂದರೆ ಒಳ್ಳೆಯದಾಗುತ್ತದೆ. ಪಂಜಾಬಿ ಹಾಗೂ ಇಂಗ್ಲೀಷ ಭಾಷೆಯ ಗೋಷ್ಠಿಗಳ ಸಿದ್ಧತೆಯಾಗಿದೆ' ಎಂದರು. ಪತ್ರಿಕೋದ್ಯಮದ ರೂವಾರಿ ದಿನದಯಾಳ ಉಪಾಧ್ಯಾಯರ ಕುರಿತು ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಹುಬ್ಬಳ್ಳಿಯ ಕಾಡಸಿದ್ದೇಶ್ವರ ಕಾಲೇಜಿನ ಹಿರಿಯ ಪ್ರಾಧ್ಯಾಪಕಿ ಡಾ. ವಿದ್ಯಾವತಿ ರಜಪೂತ ಬಹಳ ಅಚ್ಚುಕಟ್ಟಾಗಿ ಮಾಡಿದ್ದರು. ಅವರೊಂದಿಗೆ ನಾನು ಚರ್ಚಿಸಿದೆ. ಈ ವಿಷಯ ಡಾ. ಹರೀಶ ಅವರು ನನ್ನೊಂದಿಗೆ ಚರ್ಚಿಸಿದ್ದಾರೆ. ನಾವೆಲ್ಲರೂ ಸೇರಿ ದೆಹಲಿಯ ವಿಶ್ವವಿದ್ಯಾಲಯದಲ್ಲಿ ಕರ್ನಾಟಕದ ಧ್ವಜ ಹಾರಿಸೋಣ ಎಂದು ಭಾವುಕರಾಗಿ ಡಾ. ರಜಪೂತ ಮೇಡಂ ಹೇಳಿದರು. ವಿಜಯಪುರದಲ್ಲಿ ನಾವು ಸುಮಾರು ೬-೭ ರಾಷ್ಟ್ರೀಯ ವಿಚಾರ ಸಂಕಿರಣ ಮಾಡಿದ್ದೇವೆ. ಎಲ್ಲ ವಿಚಾರ ಸಂಕಿರಣದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ತಮ್ಮ ಕಾಲೇಜಿನಲ್ಲಿಯೂ ೫-೬ ರಾಷ್ಟ್ರೀಯ ವಿಚಾರ ಸಂಕಿರಣ ಹಾಗೂ ೨ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಮಾಡಿದ ಶ್ರೇಯಸ್ಸು ಅವರಿಗೆ ಹೋಗುತ್ತದೆ. ನಿವೃತ್ತಿಯಾಗುವದು ಕೆಲವೆ ತಿಂಗಳಗಳಿದ್ದರೂ ಮೇಡಂ ಅತಿ ಉತ್ಸಾಹದಿಂದ ಭಾಗವಹಿಸಿದ್ದು ಯುವಕರಿಗೆ ಮಾದರಿಯಾಗುವಂತಿತ್ತು. ಸುಮಾರು ೨೦-೨೫ ಜನರಿಗೆ 'ಪತ್ರಿಕೋದ್ಯಮ ಸಾಹಿತ್ಯ ಹಾಗೂ ರಾಷ್ಟ್ರೀಯತೆ' ವಿಷಯ ಕುರಿತು ಪ್ರಬಂಧ ತಯಾರಿಸಿ ಮೇಲ್ ಮಾಡಲು ತಿಳಿಸಿದೇವು. ಕೇವಲ ೮-೧೦ ಜನ ಪ್ರಾಧ್ಯಾಪಕರು ಮಾತ್ರ ಸ್ಪಂದಿಸಿದರು. ಉಳಿದವರು ಏನೇನೋ ನೆಪ ಹೇಳಿ ಜಾರಿಕೊಂಡರು. 'ಪ್ರಾಧ್ಯಾಪಕರ ಓದು ಹಾಗೂ ಬರಹ ಬಹಳಷ್ಟು ಕಡಿಮೆಯಾಗಿದೆ' ಎಂದು ಬಹಳಷ್ಟು ಜನ ಮಾತನಾಡುವದು ನಿಜವೆನಿಸಿತು. ಬಂದಂತಹ ಹದಿನೇಳು ಪ್ರಬಂಧಗಳನ್ನು ಡಾ. ಆರ್. ವಿ. ಪಾಟೀಲರಿಗೆ ಮೇಲ್ ಮಾಡಿದ ತಕ್ಷಣ ಅವರು ಅವುಗಳನ್ನು ನೋಡಿ, ಸಂಪಾದಕೀಯ ಬರೆದು ಸುಮಾರು ೧೮ ನಿಮಿಷಗಳಲ್ಲಿ ಮೊಬಾಯಿಲ್ ಮುಖಾಂತರ ನನಗೆ ಓದಿ ಹೇಳಿದರು. ಪರಿವಿಡಿ ತಯಾರಿಸಿದ ನಂತರ ಎಲ್ಲವು ಪ್ರೆಸ್ಸಿಗೆ ಕಳುಹಿಸಿ, ಮುದ್ರಣದ ಕೆಲಸ ಆರಂಭಿಸಿದರು. ಎಪ್ರಿಲ್ ೨೨ ರಂದು ಪುಸ್ತಕಗಳು ಮುದ್ರಣಗೊಂಡು ಕೈ ಸೇರಿದವು. ಪತ್ರಿಕೋದ್ಯಮ, ಸಾಹಿತ್ಯ ಮತ್ತು ರಾಷ್ಟ್ರೀಯತೆ ಶೀರ್ಷಿಕೆಯ ಪುಸ್ತಕ ನೋಡಿ ಅತಿ ಖುಷಿಯಾಯಿತು.

ಎಪ್ರೀಲ್ ೨೨ ಮಧ್ಯರಾತ್ರಿ ನಮ್ಮ ದೆಹಲಿ ಪ್ರಯಾಣ ಆರಂಭವಾಯಿತು. ಕ್ರೂಜರ್ ಮುಖಾಂತರ ಮುಂಜಾನೆ ೫ ಗಂಟೆಗೆ ಸೊಲ್ಲಾಪುರ ರೈಲ್ ನಿಲ್ದಾಣ ತಲುಪಿದೇವು. ಸೊಲ್ಲಾಪುರ ಚಹಾ ಎರಡು ರೀತಿ ಪ್ರಸಿದ್ದಿ ಪಡೆದಿದೆ. ನಮ್ಮ ವಿಜಯಪುರದ ವ್ಯಾಪಾರಸ್ಥರು ತಮ್ಮ ಅಂಗಡಿಗೆ ಬಂದ ಕೆಲವು ವಿಶೇಷ ಗಿರಾಕಿಗಳಿಗೆ ಚಹಾ ಕುಡಿಯಲು ಹೇಳಿ ಅಂಗಡಿಯಲ್ಲಿ ಕುಡ್ರಿಸಿಕೊಳ್ಳುತ್ತಾರೆ. ಬಹಳ ಹೊತ್ತಿನವರೆಗೆ ಚಹಾ ಬರದೆ ಇದ್ದರೆ ಎನರ್ರೀ ಸೊಲ್ಲಾಪುರ ಚಹಾ ಏನು ? ಅಂತಾ ಕೇಳುತ್ತಾರೆ. ಸೋಲ್ಲಾಪುರ ಚಹಾ ಅಂದರೆ ಸುಳ್ಳು ಎಂಬ ಅರ್ಥದಲ್ಲಿ, ಇನ್ನೊಂದು ರೀತಿಯಲ್ಲಿ ಅತಿ ರುಚಿಯಾದ ಚಹಾ ಎಂದರ್ಥ. ರೈಲ ನಿಲ್ದಾಣದ ಮುಂದಿನ ಅಂಗಡಿಯಲ್ಲಿ ಎಲ್ಲರೂ ಚಹಾ ಕುಡಿದು ನಿಲ್ದಾಣದ ಒಳಗಡೆ ಹೋದ ೧೦-೧೫ ನಿಮಿಷಗಳಲ್ಲಿ ಪ್ಲಾಟ್ ಫಾರ್ಂ ನಂ. ೧ ರಲ್ಲಿ ಹುತಾತ್ಮ ಎಕ್ಸಪ್ರೆಸ್ ರೈಲು ಬಂದು ಸೇರಿತು. ಸಿ-೧ ಕೋಚನ ಒಳಗಡೆ ಹೋಗಿ ಕುಳಿತದ್ದೇ ತಡ ಎಲ್ಲರೂ ನಿದ್ದೆಗೆ ಜಾರಿದೇವು. ೧೦ ಗಂಟೆಗೆ ಪುಣೆ ತಲುಪಿ ಅಲ್ಲಿಂದ ಮಧ್ಯಾಹ್ನ ೩ ಗಂಟೆಯ ಸುಮಾರಿಗೆ


ISSN : 2320-0391

ಮುಂಬೈ ತಲುಪಿದೇವು. ಅಲ್ಲಿಂದ ವಿಮಾನ ನಿಲ್ದಾಣಕ್ಕೆ ಬಂದು ೧೦ ಗಂಟೆಗೆ ದೆಹಲಿ ಸೇರಿದೇವು. ಶ್ರೀನಿವಾಸಪುರಿಯ ಗುರುದ್ವಾರದ ಅತಿಥಿಗೃಹದಲ್ಲಿ ನಮಗೆ ಇಳಿದುಕೊಳ್ಳುವ ವ್ಯವಸ್ಥೆ ಇತ್ತು. ಗುರುದ್ವಾರ ಅತಿಥಿಗೃಹ ತಲುಪುತ್ತಿದ್ದಂತೆ ಡಾ. ಹರೀಶ ಅವರು ಅಲ್ಲಿಗೆ ಬಂದು ಎಲ್ಲರ ಯೋಗಕ್ಷೇಮ ವಿಚಾರಿಸಿ ರಾತ್ರಿ ೧೧ ಗಂಟೆಗೆ ಊಟದ ವ್ಯವಸ್ಥೆ ಮಾಡಿದರು. ವಿಚಾರ ಸಂಕಿರಣಗಳನ್ನು ಆಯೋಜನೆ ಮಾಡುವದು ತುಂಬಾ ಕಷ್ಟ ನೂರಾರು ತೊಂದರೆಗಳು, ಅನೇಕ ಅಸ್ತವ್ಯಸ್ತತೆಯ ಮಧ್ಯದಲ್ಲಿ ಎಲ್ಲವು ಸರಿಪಡಿಸುವದೆಂದರೆ ಒಂದು ಮದುವೆ ಮಾಡಿದಂತಾಗುವದು. ಅತಿಥಿಗೃಹ ತುಂಬಾ ಚನ್ನಾಗಿತ್ತು. ಕೋಣೆಯ ಒಳಗಡೆ ತುಂಬಾ ಶೆಕೆ. ಕೋಣೆಗಳು ಕಾದ ಹಂಚಿನಂತಿದ್ದವು ಎಂದರೆ ತಪ್ಪಾಗಲಿಕ್ಕಿಲ್ಲ. ಹೇಗೋ ರಾತ್ರಿ ಕಳೆದೇವು.

ದಿನಾಂಕ ೨೬ ರಂದು ಮುಜಾನೆ ೯ ಗಂಟೆಗೆ ದೆಹಲಿ ವಿಶ್ವವಿದ್ಯಾಲಯದ ಪಿ.ಜಿ.ಡಿ.ಎ.ವಿ ಕಾಲೇಜಿಗೆ ಹೋದೆವು. ಕಾಲೇಜ ಹೊರಗಡೆಯಿಂದ ಒಂದು ಸಾಮಾನ್ಯ ಕಾಲೇಜಿನಂತೆ ಕಂಡಿತು. ಒಳಗಡೆ ಕ್ಲಾಸ್ ರೂಮ, ಸ್ಟಾಫ್ ರೂಮ, ಎಲ್ಲವು ನೋಡಿ ಖುಷಿಯಾಯಿತು. ಪ್ರತಿಶತ ೮೦ ರಷ್ಟು ಕಾಲೇಜು ಹವಾನಿಯಂತ್ರಿತ. ದೆಹಲಿಯ ಬಿಸಿಲಿಗೆ ಹವಾನಿಯಂತ್ರಣ ಬೇಕೆಬೇಕು.

ವಿಚಾರ ಸಂಕಿರಣದಲ್ಲಿ ಉದ್ಘಾಟನೆ ಸಮಾರಂಭದ ನಂತರ ಗೋಷ್ಠಿಗಳು ಆರಂಭಿಸುವದು ಒಂದು ರೂಢಿ ಅಥವಾ ಪದ್ಧತಿ. ಆದರೆ ಇಲ್ಲಿ ಮೊದಲನೆಯ ಗೋಷ್ಠಿಯ ನಂತರ ಉದ್ಘಾಟನಾ ಸಮಾರಂಭವಿತ್ತು. ಆಮಂತ್ರಣ ಪತ್ರಿಕೆಯಲ್ಲಿ ಇದ್ದಂತೆ ಸರಿಯಾಗಿ ೧೦ ಗಂಟೆಗೆ ಮೊದಲ ಗೋಷ್ಠಿ ಆರಂಭವಾಯಿತು. ಇಂಗ್ಲೀಷ, ಕನ್ನಡ, ಹಿಂದಿ, ಪಂಜಾಬಿ ನಾಲ್ಕು ಭಾಷೆಯ ಸಮಾನಾಂತರ ಗೋಷ್ಠಿಗಳು ನಡೆದವು. ಕನ್ನಡ ಗೋಷ್ಠಿಯ ಅಧ್ಯಕ್ಷ ನಾನಿದ್ದೆ. ವಿಷಯ ಪ್ರವರ್ತಕರಾಗಿ ಡಾ. ವಿದ್ಯಾವತಿ ರಜಪೂತ ಅವರಿದ್ದರು. ಗೋಷ್ಠಿಯಲ್ಲಿ ಕನ್ನಡ ಭಾಷೆ ತಿಳಿಯದೆ ಇದ್ದರು ಕೆಲವರು ಕುಳಿತದ್ದು ವಿಶೇಷವಾಗಿತ್ತು. ಆರಂಭದಲ್ಲಿ ಪ್ರೊ. ಬಿ. ಬಿ. ಡೆಂಗನವರ ಸ್ವಾಗತಿಸಿ ಪರಿಚಯ ಮಾಡಿದರು. ಪ್ರೊ. ಆರ್. ವಿ. ಪಾಟೀಲ, ಪ್ರೊ. ಎಸ್. ಜೆ. ಜಹಾಗೀರದಾರ, ಪ್ರೊ. ಎಸ್. ಜೆ. ಪವಾರ, ಪ್ರೊ. ಎಂ. ಎಸ್. ಮಾಗಣಗೇರಿ, ಪ್ರೊ. ಸರೋಜಿನಿ ಮೇಟಿ, ಪ್ರೊ. ನೀಲಾಂಬಿಕಾ ಪಾಟೀಲ ತಮ್ಮ-ತಮ್ಮ ಪ್ರಬಂಧಗಳನ್ನು ಮಂಡಿಸಿದರು. ಪ್ರೊ. ವಿದ್ಯಾವತಿ ರಜಪೂತ ಅವರು ಪತ್ರಿಕೋದ್ಯಮದ ಕುರಿತು ಚನ್ನಾಗಿ ಮಾತನಾಡಿದರು. ಅಧ್ಯಕ್ಷೀಯ ಭಾಷಣದಲ್ಲಿ ಕನ್ನಡ ಪ್ರಬಂಧಗಳ ಕುರಿತು ಕೆಲವು ಮುಖ್ಯಾಂಶಗಳನ್ನು ಹಿಂದಿ ಭಾಷೆಯಲ್ಲಿ ತಿಳಿಸುವ ಪ್ರಯತ್ನ ನನ್ನದಾಗಿತ್ತು. ಯಾಕೆಂದರೆ ಪಂಜಾಬ, ಹರಿಯಾಣಾ ಹಾಗೂ ದೆಹಲಿಯ ಕೆಲ ಪ್ರಾಧ್ಯಾಪಕರಿದ್ದರು.

ಮಧ್ಯಾಹ್ನ ೨ ಗಂಟೆಗೆ ಜ್ಯೋತಿ ಬೆಳಗುವದರೊಂದಿಗೆ ಉದ್ಘಾಟನಾ ಸಮಾರಂಭ ಆರಂಭಗೊಂಡಿತು. ಪತ್ರಿಕೋದ್ಯಮ, ಸಾಹಿತ್ಯ ಮತ್ತು ರಾಷ್ಟ್ರೀಯತೆ ವಿಷಯ ಕುರಿತು ಜರುಗಿದ ಎರಡು ದಿನಗಳ ಅಂತಾರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಮಾಖನಲಾಲ ಚತುರ್ವೇದಿ ಪ್ರಚಾರ ಮತ್ತು ಸಂಚಾರ ವಿಶ್ವವಿದ್ಯಾಲಯ, ಭೂಪಾಲದ ವಿಶ್ರಾಂತ ಕುಲಪತಿಗಳಾದ ಪ್ರೊ. ಅಚ್ಯುತಾನಂದ ಮಿಶ್ರ ರಾಷ್ಟ್ರೀಯತೆಯ ಸಂದರ್ಭದಲ್ಲಿ ಪತ್ರಿಕೋದ್ಯಮದ ಪಾತ್ರ ಮುಖ್ಯ ಎಂದು ಅಭಿಪ್ರಾಯಪಟ್ಟರು. ಪತ್ರಿಕೋದ್ಯಮಕ್ಕಿಂತ ಮುಂಚಿತವಾಗಿ ಸಾಹಿತ್ಯದ ಮುಖಾಂತರವಾಗಿ ಜನರಲ್ಲಿ ರಾಷ್ಟ್ರೀಯತೆಯ ವಿಚಾರ ಮೂಡುತ್ತಿದ್ದವು. ನಂತರದ ದಿನಗಳಲ್ಲಿ ಪತ್ರಿಕೆಗಳು ಮಹತ್ವದ ಪಾತ್ರವಹಿಸಿದ್ದವು. ಇತ್ತೀಚಿನ ದಿನಗಳಲ್ಲಿ ಸಮೂಹ ಮಾಧ್ಯಮಗಳು ಯುವಕರಲ್ಲಿ ರಾಷ್ಟ್ರಭಕ್ತಿಯ ಸಂದೇಶವನ್ನು ಸಾರುತ್ತಿವೆ ಎಂದರು. ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಭಾರತೀಯ ಜನಸಂಚಾರ ಸಂಸ್ಥೆಯ ಮಹಾನಿರ್ದೇಶಕ ಕೆ. ಜಿ. ಸುರೇಶ ಮಾತನಾಡುತ್ತಾ ಪ್ರಜಾಪ್ರಭುತ್ವದ ಜನನಾಡಿಯಂತೆ ಕಾರ್ಯನಿರ್ವಹಿಸುತ್ತಿರುವ ಪತ್ರಿಕೆ ಹಾಗೂ ಮಾಧ್ಯಮಗಳು ಸಾಮಾಜಿಕ ಸಂದರ್ಭದಲ್ಲಿ ವಸ್ತುನಿಷ್ಠ, ಶುದ್ಧ ವರದಿಗಳಿಂದಾಗಿ ನೈತಿಕತೆಯ ತಿಳುವಳಿಕೆಯನ್ನು ಬಿತ್ತುವ, ಸಮಾಜವನ್ನು ಸದಾ ಜಾಗೃತ ಸ್ಥಿತಿಯಲ್ಲಿಡುವ ಶಕ್ತಿ ಮಾಧ್ಯಮಕ್ಕೆ ಇದೆ. ಭಾಷೆಗಳು ರಾಷ್ಟ್ರವನ್ನು ಜೋಡಿಸುವ ಕೆಲಸ ಮಾಡುತ್ತಿವೆ. ಆ ನಿಟ್ಟಿನಲ್ಲಿ ಕರ್ನಾಟಕದ ಸೃಜನ ತ್ರೈಮಾಸಿಕ ಪತ್ರಿಕೆ ಕನ್ನಡ-ಹಿಂದಿ ಭಾಷೆಯ ಮುಖಾಂತರ ರಾಷ್ಟ್ರೀಯತೆಯನ್ನು ಜಾಗೃತಗೊಳಿಸುವ ಕಾರ್ಯ ನಿರ್ವಹಿಸುತ್ತಿದೆ ಎಂದು ಹೇಳಿದರು. ಈ ವಿಚಾರ ಸಂಕಿರಣದಲ್ಲಿ ಮಂಡಿಸಲು ಆಯ್ಕೆಯಾದ ಪ್ರಬಂಧಗಳನ್ನು 'ಪತ್ರಿಕೋದ್ಯಮ, ಸಾಹಿತ್ಯ ಹಾಗೂ ರಾಷ್ಟ್ರೀಯತೆ' ಶೀರ್ಷಿಕೆಯ ಕನ್ನಡ ಸಂಕಲನಾತ್ಮಕ ಗ್ರಂಥವನ್ನು ಲೋಕಾರ್ಪಣೆ ಮಾಡಲಾಯಿತು. ಡಾ. ವಿದ್ಯಾವತಿ ರಜಪೂತ, ಡಾ. ಎಸ್. ಟಿ. ಮೇರವಾಡೆ ಹಾಗೂ ಡಾ. ಆರ್. ವಿ. ಪಾಟೀಲ ಸಂಪಾದಿಸಿದ ಈ ಕೃತಿ ಸುಮಾರು ಹದಿನೇಳು ಅಧ್ಯಯನ ಪೂರ್ಣ ಲೇಖನಗಳಿಂದ ಕೂಡಿದ್ದು ರಾಷ್ಟ್ರೀಯತೆ, ಮಾಧ್ಯಮ ಮತ್ತು ಸಾಹಿತ್ಯವನ್ನು ಕುರಿತು ಹೊಸ ಹೊಳವುಗಳನ್ನು ಒಳಗೊಂಡಿದೆ.

ಉದ್ಘಾಟನಾ ಸಮಾರಂಭ ಮುಗಿಸಿ, ಆಟೋದಲ್ಲಿ ಅತಿಥಿಗೃಹಕ್ಕೆ ತೆರಳಬೇಕು ಅಂತಾ ಮಾತನಾಡುತ್ತಾ ಹೋಗುವದರಲ್ಲಿಯೇ ದೆಹಲಿಯ ಆಟೊ ಚಾಲಕ 'ಯಾವ ಊರು' ಅಂತಾ ಕನ್ನಡದಲ್ಲಿ ಮಾತನಾಡಿದ. ನಾವೆಲ್ಲರೂ ಆಶ್ಚರ್ಯಚಕಿತರಾಗಿ ನಿಂತುಕೊಂಡೆವು. 'ಎನಪ್ಪ ನಿನಗೆ ಕನ್ನಡ ಬರತ್ತಾ' ಅಂತಾ ಕೇಳಿದ ತಕ್ಷಣ 'ಸರ್ ನಾನು ವಿಜಯಪುರದವನು' ಅಂತಾ ಉತ್ತರಿಸಿದನು. ಅವನೊಂದಿಗೆ ಮಾತನಾಡುವಾಗ ತನ್ನ ಕಥೆ ಹೇಳತೊಡಗಿದ– 'ಸರ್ ನಮ್ಮ ತಂದೆ ಸಿದ್ದಪ್ಪ ಬೂಯಾರ್ ಮೂವತ್ತು ವರ್ಷಗಳ ಹಿಂದೆ ಮನೆಯಲ್ಲಿ ಜಗಳಮಾಡಿ ಇಲ್ಲಿಗೆ ಬಂದು ಆಟೋ ಚಾಲಕನಾಗಿ ಕೆಲಸ ಮಾಡುತ್ತಾ ಕುಟುಂಬ ಸಹಿತ ಕರೆತಂದು ಇಲ್ಲಿಯ ನಿವಾಸಿಯಾದರು. ೪–೫ ವರ್ಷಗಳ ನಂತರ ನನ್ನ ಜನ್ಮವಾಯಿತು. ನಾನು ಸಹಿತ ಶಾಲೆ ಕಲಿಯಲಿಲ್ಲಾ. ೮–೧೦ ವರ್ಷದವನಿದ್ದಾಗಲೇ ಅಲ್ಲಿ–ಇಲ್ಲಿ ಕೆಲಸ ಮಾಡಿ ೨೦ ನೆಯ ವಯಸ್ಸಿನಲ್ಲಿ ಆಟೋ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ಪ್ರತಿದಿನದ ಸಂಪಾದನೆ ಎಲ್ಲ ಖರ್ಚು ತೆಗೆದು ಅಂದಾಜು ಒಂದು ಸಾವಿರ ರೂಪಾಯಿಗಳವರೆಗೂ ಇದೆ ಅಂತಾ ಆನಂದ ವ್ಯಕ್ತಪಡಿಸಿದನು. ಆತನ ಹೆಸರು ಪರಶುರಾಮ ಅವರ ಮನೆಯಲ್ಲಿ ಕನ್ನಡವೇ ಮಾತನಾಡುತ್ತಾರೆ. ಈವರೆಗೂ ಸ್ವಂತ ಮನೆ ಇಲ್ಲಾ. ಪ್ಲಾಟ್ ಏನಾದರೂ ಖರೀದಿಸಿದ್ದಿರಾ ಅಂತಾ ಕೇಳಿದಾಗ – ಇಲ್ಲ, ನಮ್ಮ ಸಂಪಾದನೆಗೆ ಇಲ್ಲಿಯ ಖರ್ಚಿಗೆ ಸರಿಯಾಗುತ್ತೆ, ಆದರೂ ಪ್ಲಾಟ್ ಖರೀದಿಸುವ ಆಸೆ ಇದೆ. ಪ್ಲಾಟ್ ಎಲ್ಲಿ ಖರೀದಿಸುತ್ತಿ ಅಂತಾ ಪ್ರಶ್ನಿಸಿದಾಗ ಖರೀದಿಸಿದರೆ ವಿಜಯಪುರದಲ್ಲಿಯೇ ಖರೀದಿಸುವೆ ಅಂತಾ ತನ್ನ ಮಾತೃಭೂಮಿಯ ಪ್ರೇಮವನ್ನು ವ್ಯಕ್ತಪಡಿಸಿದನು. ಅವನೊಂದಿಗೆ ಮಾತನಾಡುತ್ತಾ ನಾವು ಅತಿಥಿಗೃಹ ತಲುಪಿದೇವು.

ಸಂಜೆ ೫.೩೦ ಕ್ಕೆ ನಮ್ಮ ಅತಿಥಿಗೃಹದ ಪಕ್ಕದಲ್ಲಿಯೇ ಇದ್ದ ಸ್ವಾಮಿ ನಾರಾಯಣ ಮಂದಿರ ಅಕ್ಷರಧಾಮಕ್ಕೆ ಹೋದೆವು. ವಿಚಾರ ಸಂಕಿರಣಕ್ಕೆ ಹುಬ್ಬಳ್ಳಿಯಿಂದ ಡಾ. ವಿದ್ಯಾವತಿ ರಜಪೂತ, ಡಾ. ಸರೋಜಿನಿ ಮೇಟಿ ಹಾಗೂ ಡಾ. ನಿಲಾಂಬಿಕಾ ಪಾಟೀಲ ಮೂವರು ಬಂದಿದ್ದರು. ಎಲ್ಲರೂ ಒಟ್ಟಿಗೆ ಅಕ್ಷರಧಾಮ ಸುತ್ತಾಡಿದೇವು. ಹೂ, ಗಿಡ, ಬಳ್ಳಿ, ಸ್ವಾಮಿ ನಾರಾಯಣ ಮಂದಿರದ ವಾಸ್ತು ಶಿಲ್ಪ ನೋಡಿ ತುಂಬಾ ಆನಂದವಾಯಿತು.

ವಿಚಾರ ಸಂಕಿರಣದ ಎರಡನೆಯ ದಿನ ಹತ್ತು ಗಂಟೆಗೆ ಮೂರನೆಯ ಗೋಷ್ಠಿ ಆರಂಭವಾಯಿತು. ಅತಿಥಿಗಳಾಗಿ ಪ್ರೊ. ಅರುಣ ಕುಮಾರ ಭಗತ ಆಗಮಿಸಿದ್ದರು. ಅವರು ರಾಷ್ಟ್ರೀಯತೆ ಕುರಿತು ಒಳ್ಳೆಯ ವಿಚಾರಗಳನ್ನು ವ್ಯಕ್ತಪಡಿಸಿದರು. ವಿಶಿಷ್ಟ ಅತಿಥಿಗಳಾಗಿ ಆಗಮಿಸಿದ 'ಪಂಜಾಬ ಕೇಸರಿ' ದಿನಪತ್ರಿಕೆಯ ಸಂಪಾದಕಿ ಶ್ರೀಮತಿ ಕಿರಣ ಚೋಪಡಾ ಮಾತನಾಡುತ್ತಾ ಇಂದು ಪತ್ರಿಕೆಗಳು ಬಹಳಷ್ಟು ಒಳ್ಳೆಯ ಕಾರ್ಯಗಳನ್ನು ಮಾಡುತ್ತಿವೆ. ಅವುಗಳಿಂದ ಸ್ವಚ್ಛ ಸಮಾಜದ ನಿರ್ಮಾಣವಾಗುತ್ತಾ ಇದೆ. ನಮ್ಮ ಮನೆಯಲ್ಲಿ ನಾನು ಐದನೆಯ ತಲೆಮಾರಿನ ಸಂಪಾದಕಿ ಆಗಿದ್ದೇನೆ ಅಂತಾ ಹೆಮ್ಮೆಯಿಂದ ಹೇಳಿಕೊಂಡರು. ಪತ್ರಿಕೆಗಳ ಸಂಪಾದಕೀಯ ಅಥವಾ ಸುದ್ದಿಗಳನ್ನು ಬರೆಯುವಾಗ ನಿಷ್ಠುರವಾಗಬೇಕಾಗುತ್ತದೆ. ನಿಷ್ಠುರತೆಯಿಂದ ತೊಂದರೆಗಳು ಬರುತ್ತವೆ. ಅವುಗಳನ್ನು ಎದುರಿಸುವ ಶಕ್ತಿ ನಮ್ಮಲ್ಲಿ ಇರಬೇಕು ಅಂತಾ ತಮ್ಮ ಅನುಭವದ ಮಾತುಗಳನ್ನು ಆಡಿದರು. ಅಧ್ಯಕ್ಷಸ್ಥಾನವಹಿಸಿದ ದೆಹಲಿ ವಿಶ್ವವಿದ್ಯಾಲಯದ ಹಿಂದಿ ವಿಭಾಗದ ಪ್ರೊ. ಕುಮುದ ಶರ್ಮಾ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಪತ್ರಿಕೋದ್ಯಮ, ರಾಷ್ಟ್ರೀಯತೆ ಹಾಗೂ ರಾಷ್ಟ್ರವಾದ ಈ ಮೂರನ್ನು ಬಳಸಿಕೊಂಡು ಅರ್ಥಪೂರ್ಣವಾಗಿ ವಿವರಣೆ ನೀಡಿದರು.

ಮಧ್ಯಾಹ್ನ ಒಂದು ಗಂಟೆಗೆ ಊಟದ ವಿರಾಮ. ಊಟದ ವ್ಯವಸ್ಥೆ ಚೆನ್ನಾಗಿತ್ತು. ನಮ್ಮೆಲ್ಲಯಾರಿಗೂ ಅವರ ಊಟ ಹಿಡಿಸುತ್ತಿರಲಿಲ್ಲ. ಅದೇ ಪುರಿ, ಪನ್ನಿರ, ದಹಿವಡಾ ಹಾಗೂ ರಸಗುಲ್ಲಾ. ನಾವೆಲ್ಲ ಊಟ ಮಾಡುವಾಗ ವಿಜಯಪುರದ ರೊಟ್ಟಿ, ಶೆಂಗಾ ಚಟ್ನಿ, ಮೊಸರು, ಅನ್ನ ಬೇಳೆಸಾರು ಎಲ್ಲವು ನೆನಪಿಸಿಕೊಳ್ಳುತ್ತಿದ್ದೆವು. ನಾಲ್ಕು ಗಂಟೆಗೆ ಸಮಾರೋಪ ಸಮಾರಂಭ ಪೂರ್ಣಗೊಂಡ ನಂತರ ಪ್ರಮಾಣ ಪತ್ರ ಪಡೆದುಕೊಂಡು ಅತಿಥಿಗೃಹ ಸೇರಿದೇವು.

ವಿಚಾರ ಸಂಕಿರಣ ಮುಗಿಸಿ ಬರುವಾಗ ಪಿ.ಜಿ.ಡಿ.ಎ.ವಿ. ಕಾಲೇಜಿನವರು ನಮ್ಮನ್ನು ಆತ್ಮೀಯವಾಗಿ ಬೀಳ್ಕೊಟ್ಟರು. ಕರ್ನಾಟಕದ ಜನರಿಂದ ನಮ್ಮ ವಿಚಾರ ಸಂಕಿರಣಕ್ಕೆ ಹೊಸ ಮೆರಗು ಬಂತು ಅಂತಾ ಕಾಲೇಜ ಪ್ರಾಚಾರ್ಯ ಡಾ. ರವೀಂದ್ರ ಕುಮಾರ ಗುಪ್ತಾ ಗುಣಗಾನ ಮಾಡಿದರು. ಸಂಯೋಜಕರಾದ ಡಾ. ಹರೀಶ ಅರೋಡಾ ಅವರು ತಾವೆಲ್ಲರೂ ಪ್ರತಿಯೊಂದು ಗೋಷ್ಠಿಯಲ್ಲಿ ಉತ್ಸಾಹದಿಂದ ಕುಳಿತದ್ದು ನಿಜವಾಗಿ ಆನಂದವಾಗಿದೆ ಎಂದರು. ಅವರ ಪ್ರಶಂಸೆ ಸರಿಯಾಗಿಯೇ ಇತ್ತು

ಯಾಕೆಂದರೆ ಸುಮಾರು ಎರಡು ತಾಸಿನ ನಾಲ್ಕು ಗೋಷ್ಠಿ ಹಾಗೂ ಎರಡು ತಾಸಿನ ಉದ್ಘಾಟನಾ ಸಮಾರಂಭದಲ್ಲಿ ಮುಂದಿನ ಸಾಲಿನಲ್ಲಿಯೇ ಪ್ರೇಕ್ಷಕರಾಗಿದ್ದೆವು. ಹಿಂದಿ ಪ್ರಾಧ್ಯಾಪಕರು ಅಷ್ಟೇ ಅಲ್ಲ, ಕನ್ನಡದ ಪ್ರಾಧ್ಯಾಪಕರು ಸಹ ಕುಳಿತುಕೊಂಡದ್ದು ವಿಶೇಷವಾಗಿತ್ತು.

ಇತ್ತಿಚಿನ ದಿನಗಳಲ್ಲಿ ವಿಚಾರ ಸಂಕಿರಣಗಳು ಹೆಸರಿಗೆ ಮಾತ್ರ ಆಗಿವೆ. ಸೆಮಿನಾರ ಹಾಲ್ ಕಲ್ಯಾಣ ಮಂಟಪದಂತಾಗಿವೆ. ಕಲ್ಯಾಣ ಮಂಟಪದಲ್ಲಿ ವಧುವರರಿಗೆ ಅಕ್ಷತೆ ಹಾಕಿ ಊಟಕ್ಕೆ ಹೋದಂತೆ ವಿಚಾರ ಸಂಕಿರಣದ ಉದ್ಘಾಟನೆಯ ನಂತರ ಊಟ ಮುಗಿಸಿ ಎಲ್ಲೆಲ್ಲೋ ಹೋಗುತ್ತಾರೆ. ಕೊನೆಗೆ ಪ್ರಮಾಣ ಪತ್ರ ವಿತರಣೆ ಸಮಯಕ್ಕೆ ಸರಿಯಾಗಿ ಬಂದು ಹಾಜರಾತಿ ಪ್ರಮಾಣ ಪತ್ರದೊಂದಿಗೆ ಪ್ರಮಾಣ ಪತ್ರ ಪಡೆದುಕೊಂಡು ಹೋಗುವದು ಸಾಮಾನ್ಯವಾಗಿದೆ. ಆಯೋಜಕರು ಒಳ್ಳೆಯ ಸಾಹಿತಿ, ಭಾಷಣಕಾರರನ್ನು ಆಮಂತ್ರಿಸಿ ಅವರ ವಿಚಾರಗಳು ಎಲ್ಲರಿಗೆ ತಲುಪಿಸುವ ಉದ್ದೇಶ ಹೊಂದಿರುತ್ತಾರೆ. ಅನೇಕ ತೊಂದರೆ-ತಾಪತ್ರೆಗಳೊಂದಿಗೆ ವಿಚಾರ ಸಂಕಿರಣ ಆಯೋಜಿಸಿದ್ದು ಅರ್ಥಹೀನ ಅನಿಸಿಕೊಳ್ಳುತ್ತದೆ.

ಸಂಜೆ ಆರು . ಗಂಟೆಗೆ ಸರೋಜಿನಿ ಮಾರ್ಕೆಟ್ ಸುತ್ತಾಡಲು ಹೊರಟೇವು. ಸುಮಾರು ೨೦-೨೫ ವರ್ಷಗಳಿಂದ ಏನಾದರು ಒಂದು ಕಾರಣದಿಂದ ದೆಹಲಿಗೆ ಹೋಗುತ್ತೇವೆ. ಪ್ರತಿ ಸಲ ಸರೋಜಿನಿ ಮಾರ್ಕೆಟಗೆ ಭೇಟಿ ಕೊಟ್ಟೇ ಬರುತ್ತೇವೆ. ಈ ಸಲವೂ ಪರಂಪರೆ ಮುರಿಯದೆ ಸರೋಜಿನಿ ಮಾರ್ಕೆಟಗೆ ಹೋದೆವು. ಇಲ್ಲಿ ಗುಣಮಟ್ಟದ ಬಟ್ಟೆ, ಟೀ-ಶರ್ಟ್ ಇತ್ಯಾದಿಗಳು ಸಿಗುತ್ತವೆ. ಬಟ್ಟೆ ಖರೀದಿ ಮುಗಿಸಿ ಹೊಸದಾಗಿ ಆರಂಭಗೊಂಡ ಹೋಟೆಲ ಒಂದರಲ್ಲಿ ಊಟಕ್ಕೆ ಹೋದೆವು. ಉಡುಪಿ ಪದ್ಧತಿ ಊಟ ಇತ್ತು. ಒಬ್ಬಿಬ್ಬರು ದೋಸೆ ತಿಂದರು. ಉಳಿದವರು ಊಟ ಮಾಡಿದರು.

ಎಪ್ರೀಲ್ ೨೯ ರಂದು ದೆಹಲಿಯ ಪಾಲಿಕಾ ಬಜಾರ, ಖಾದಿ ಭಂಡಾರ, ಕರೋಲ ಬಾಗ, ಸುತ್ತಾಡಿ ಒಂದೆರಡು ಪುಸ್ತಕ ಅಂಗಡಿಗಳಿಗೆ ಹೋಗಿ ಮರುದಿನ ಮುಂಜಾನೆ ೬.೩೦ ರ ಸುಮಾರಿಗೆ ದೆಹಲಿ ವಿಮಾನ ನಿಲ್ದಾಣಕ್ಕೆ ಬಂದು ಅಲ್ಲಿಂದ ಮುಂಬೈಯ ಮುಖಾಂತರ ಪುಣೆ, ಸೊಲ್ಲಾಪುರ ನಂತರ ವಿಜಯಪುರ ತಲುಪಿದೇವು. ಐದು ದಿನಗಳ ಈ ಶೈಕ್ಷಣಿಕ ಪ್ರವಾಸ ತುಂಬಾ ಸಂತೋಷ ತಂದಿತು. ಸಮಯ ಸಿಕ್ಕಾಗೆಲ್ಲ ವೈಯಕ್ತಿಕ ವಿಚಾರಗಳು, ಸಾಹಿತ್ಯದ ಚರ್ಚೆ, ತಿಂಡಿ-ತಿನಿಸುಗಳ ಮಧ್ಯ ಡಾ. ಎಸ್. ಜೆ. ಪವಾರ ಹಾಗೂ ಪ್ರೊ. ಎಂ. ಎಸ್. ಮಾಗಣಗೇರಿ ಅವರ ಹಾಸ್ಯ ಚಟಾಕಿಗಳು ಹಾರುತ್ತಿದ್ದವು. ಒಟ್ಟಿನಲ್ಲಿ ಅಂತಾರಾಷ್ಟ್ರೀಯ ವಿಚಾರ ಸಂಕಿರಣದ ನಮ್ಮ ದೆಹಲಿ ಪ್ರವಾಸ ಸುಖಕರವಾಗಿತ್ತು.

■■

---

ಮುಖ್ಯಸ್ಥರು ಹಿಂದಿ ವಿಭಾಗ, ಎಸ್. ಬಿ. ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ.